ಮಾಡಿ ಮುಗಿಸ್ತೀನಿ. ನೀವು ಹೇಳಿದ್ದು ನಿಜವೇ ಆಗಿದ್ದರೆ, ನಾನು ಯಾರಿಗಾದರೂ ಯಾವಾಗಲಾದರೂ ನನ್ನ ಮೇಲೆ ಇಷ್ಟು ದ್ವೇಷ ಹುಟ್ಟುವಂತಹ ಯಾವ ಕೆಲಸ ಮಾಡಿದ್ದೇನೆ!? ನನಗೆ ಅನ್ನಿಸ್ತೆ, ಬಹುಶಃ ಗುಂಡು ಹಾರಿಸಿದವನ ಗುರಿ ಬೇರೆ ವ್ಯಕ್ತಿಯೇ ಇರಬೇಕು. ಅವನ ಗುರಿ ತಪ್ಪಾಗಿದೆ ಎಂದು ನಾನು ಅಂದುಕೊಳ್ತೀನೆ' ಎಂದ ಸದಾಶಿವ ಅವರಿಗೆ ವಿದಾಯ ಹೇಳಿ ಇನ್‌ಸ್ಪೆಕ್ಟರ್ ಮತ್ತು ಪೇದೆಗಳು ಅಲ್ಲಿಂದ ನಿರ್ಗಮಿಸಿದರು.

★★★

ಇನ್‌ಸ್ಪೆಕ್ಟರ್ ಮತ್ತು ಪೇದೆಗಳ ನಿರ್ಗಮನದ ಬಳಿಕ ಸದಾಶಿವ ಸ್ವಲ್ಪ ಯೋಚಿಸತೊಡಗಿದರು– 'ಇನ್‌ಸ್ಪೆಕ್ಟರ್ ಹೇಳಿದ್ದು ಸರಿಯಾಗೇ ಇದೆ' ಎಂದುಕೊಂಡ ಅವರ ಸ್ಮೃತಿಪಟಲದಲ್ಲಿ ಗತಿಸಿದ ಕೆಲವು ಘಟನಾವಳಿಗಳು ಪುಂಖಾನುಪುಂಖವಾಗಿ ಮೂಡಿ ಬರಲಾರಂಭಿಸಿದವು... ಒಂದು ದಿನ ತನ್ನ ಮಿತ್ರ ವಾಸುದೇವ್ ಹತ್ತಿರ ಮಾತನಾಡುತ್ತ ಅವರ ಪತ್ನಿ ಜಾನಕಿಯ ಕುರಿತು ಕೆಟ್ಟದಾಗಿ ಟೀಕೆ ಮಾಡಿದ್ದರು. ಅಂದಿನಿಂದ ವಾಸುದೇವ್, ಸದಾಶಿವರನ್ನು ಮತ್ತೆ ಭೇಟಿ ಮಾಡಿರಲಿಲ್ಲ. ಒಂದರ್ಥದಲ್ಲಿ ಅವರಿಬ್ಬರ ನಡುವಿನ ಸ್ನೇಹ, ಗೌರವ, ವಿಶ್ವಾಸ ಮುರಿದುಬಿದ್ದಿತ್ತು. ಹೀಗಾಗಿ ವಾಸುದೇವ್‌ಗ್ಯಾಕೆ ತನ್ನ ಮೇಲೆ ವೈರತ್ವ ಇರಬಾರದು! ವಾಸುದೇವ್ ಮೇಲೆ ಸಂಶಯದ ಹೊಗೆಯಾಡಿತ್ತು.

ಟೈಲರ್ ಸುಬಾನ್ ಸಾಬ್ ಚಿತ್ರ ಅವರ ಮಿದುಳಿನಲ್ಲಿ ಮಿಂಚಿತು. ಸುಮಾರು 15 ವರ್ಷಗಳಿಂದಲೂ ಸದಾಶಿವ ತಮ್ಮ ಬಟ್ಟೆಗಳನ್ನು ಟೈಲರ್ ಸುಬಾನ್ ಸಾಬ್ ಬಳಿಯೇ ಹೊಲಿಸುತ್ತಿದ್ದರು. ಸುಬಾನ್ ಸಾಬ್‌ಗೆ ಕ್ಷಯರೋಗ ಬಂದಿತ್ತು. ಇದರಿಂದಾಗಿ ಸದಾಶಿವ, ಅವರ ಬಳಿ ಬಟ್ಟೆ ಹೊಲಿಸುವುದನ್ನು ಬಿಟ್ಟರು.

ಸುಬಾನ್ ಸಾಬ್‌ಗೆ ಕ್ಷಯ ಉಲ್ಬಣವಾಗಿ ಹಣಕಾಸಿನ ನೆರವಿಗಾಗಿ ಸದಾಶಿವರನ್ನು ಅಂಗಲಾಚಿದರು. ಹಣ ಕೊಡದೇ ಸದಾಶಿವ 'ಯಾಕೋ ಇತ್ತೀಚೆಗೆ ನೀವು ಹೊಲಿದುಕೊಟ್ಟ ಬಟ್ಟೆಗಳು ಅಳತೆಯಲ್ಲಿ ತೃಪ್ತಿದಾಯಕವಾಗಿಲ್ಲ!' ಎಂದು ವಾಪಸ್ ಕಳುಹಿಸಿದ್ದರು. ಜಿದ್ದಿಗೆ ಆ ಟೈಲರ್ ಸುಬಾನ್ ಸಾಬ್ ಏನಾದರೂ ಇಂಥ ಕೆಲಸ ಮಾಡಿರಬಹುದೇ! ಸಂಶಯ ಉದ್ಭವಿಸಿತು ಸದಾಶಿವರ ಮನದಲ್ಲಿ.

ಸದಾಶಿವರವರಿಗೆ ಆಫೀಸಲ್ಲಿ ಫೈಲ್ ಕ್ಲರ್ಕ್ ವೆಂಕಟಾದ್ರಿ ನೆನಪಿಗೆ ಬಂದ. ಆತ ಅಗತ್ಯವಿರುವ ಫೈಲುಗಳನ್ನು ತಂದು ಕೊಡದಿದ್ದಾಗ, ಆತನನ್ನು ಇತರೆ ಆಫೀಸ್ ಸಿಬ್ಬಂದಿಯರ ಮುಂದೆಯೇ 'ರ್‍ಯಾಸ್ಕಲ್... ಕೆಲಸಕ್ಕೆ ಬಾರದವನು...' ಅಂತ ಬಾಯಿಗೆ ಬಂದಂತೆ ತನಗಿಂತ ಹಿರಿಯ ವ್ಯಕ್ತಿಯಾಗಿದ್ದರೂ ಕೊಳಕು ಪದಗಳಲ್ಲಿ ಬೈದಿದ್ದರು. ಅವಮಾನದಿಂದ ಬೆಂದ ವೆಂಕಟಾದ್ರಿ ಈ ಕೆಲಸವನ್ನು ಮಾಡಿರಬಹುದಲ್ಲವೇ! ಸಂಶಯದ ಹೊಗೆಯಾಡಿತು ಸದಾಶಿವರ ಮನದಲ್ಲಿ. 'ತನ್ನ ಕೈ ಕೆಳಗೆ ಕೆಲಸ ಮಾಡುವ ಡೇವಿಡ್, ರಾಮಪ್ರಸಾದ್, ಜಗ್ಗೂ, ಹರೀಶ್... ಹೀಗೆ ಇನ್ನೂ ಅನೇಕ ಕೆಲಸಗಾರರನ್ನು ಅಸಭ್ಯ ಭಾಷೆಯಿಂದ ಬೈದು ಅವಮಾನಿಸಿದ್ದೇನೆ. ಇವರಲ್ಲೆ ಒಬ್ಬರು ನನ್ನ ಮೇಲಿನ ರೋಷಕ್ಕೆ ನನ್ನ ಕೊಲೆ ಪ್ರಯತ್ನವನ್ನು ಮಾಡಿರಬಾರದೇಕೆ!' ಎಂದುಕೊಂಡರು.

ಅವರಿಗೆ ರಾತ್ರಿ ನಿದ್ರೆ ಹತ್ತಲಿಲ್ಲ. ಹಾಸಿಗೆಯಲ್ಲೇ ಹೊರಳಾಡಿದರು. ಕತ್ತಲಲ್ಲಿ ಎದ್ದು ಕುಳಿತರು. ಕಣ್ಣುಗಳ ಮುಂದೆ ಕೆ.ಎ.ಎಸ್. ಪರೀಕ್ಷೆಯನ್ನು ಪ್ರಥಮ ದರ್ಜೆಯಲ್ಲಿ ಪಾಸ್ ಮಾಡಿದ್ದ ಅಭ್ಯರ್ಥಿ ಚಂದ್ರಶೇಖರ್ ಚಿತ್ರ ಮೂಡಿತು. '25 ಲಕ್ಷ ರೂಪಾಯಿಗಳ ಲಂಚ ಕೊಟ್ಟರೆ ತಹಶೀಲ್ದಾರ್ ಹುದ್ದೆ ಕೊಡಿಸುತ್ತೇನೆ ಎಂದು ಭರವಸೆ ನೀಡಿದ್ದೆ. ಲಂಚ ಕೇಳಿದೆ ಎಂಬ